ದಿನಾಂಕಃ 29.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಸಿ.ವಿ.ಸಿ ವಕೀಲರಿಂದಃ

4. ವಾದಿ ಮತ್ತು ಪ್ರತಿವಾದಿಯರ ಮಧ್ಯ ಆದ ವ್ಯವಹಾರದ ಬಗ್ಗೆ ಸಂಪೂರ್ಣವಾಗಿ ಮಾಹಿತಿ ಇರುತ್ತದೆಯಾ? ಎನ್ನುವ ಪ್ರಶ್ನೆಗೆ ಸಾಕ್ಷಿಯು 2 ನೇ ಭಾರಿ ಆದ ನೊಂದ ಖರೀದಿ ಕರಾರ ಪತ್ರದ ಬಗ್ಗೆ ಮಾಹಿತಿ ಇರುವುದಾಗಿ ನುಡಿಯುತ್ತಾರೆ. ಪ್ರತಿವಾದಿ ದಾವಾ ಆಸ್ತಿಯನ್ನು ಯಾರಿಂದ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ದಾವಾ ಆಸ್ತಿಯ ಬಗ್ಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿ ಪ್ರತಿವಾದಿಗೆ ಹೇಗೆ ಬಂದಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿ ಖರೀದಿಸಿದ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ.

5. ಯಾವ ಆಧಾರದ ಮೇಲೆ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿಸಿರುತ್ತಾನೆ ಎಂದು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಪ್ರತಿವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ಇತ್ತು ಎಂದು ನುಡಿಯುತ್ತಾರೆ. 2 ನೇ ಖರೀದಿ ಕರಾರ ಪತ್ರ ದಿ:16.02.2018 ರಂದು ಆಗಿರುತ್ತದೆ. ಸದರಿ ಖರೀದಿ ಕರಾರ ಪತ್ರವನ್ನು ಲಗಮಣ್ಣ ಬಿ.ಪಾಟೀಲ ಎನ್ನುವವರು ಬರೆದಿರುತ್ತಾರೆ. ಸದರಿ ಖರೀದಿ ಕರಾರ ಪತ್ರವನ್ನು ಬರೆಯಲು ಪ್ರತಿವಾದಿ ಮಾಹಿತಿ ಕೊಟ್ಟಿರುತ್ತಾನೆ. ಸದರಿ ಖರೀದಿ ಕರಾರ ಪತ್ರವನ್ನು ಬರೆಸುವ ಕಾಲಕ್ಕೆ ನಾನು, ವಾದಿ, ನಿಂಗಪ್ಪ ಸಣ್ಣಕ್ಕಿ ಮತ್ತು ಪ್ರತಿವಾದಿ ಎಲ್ಲರೂ ಇದ್ದೇವು. ಸದರಿ ಪತ್ರದಲ್ಲಿರುವ ಸಂಗತಿಯ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಸದರಿ ಕರಾರ ಪತ್ರದಲ್ಲಿ ಮುಂಚೆ ವಾದಿ ಪ್ರತಿವಾದಿಯಿಂದ ದಾವಾ ಆಸ್ತಿಯನ್ನು ರೂ.9,00,000/- ಗಳಿಗೆ ಖರೀದಿಸಲು ಒಪ್ಪಿ ಆ ಪೈಕಿ ರೂ.7,60,000/- ಕೊಟ್ಟು ಪತ್ರ ಬರೆಸಿಕೊಂಡಿದ್ದು, ನಂತರ ರೂ.1,20,000/- ಗಳನ್ನು ಕೊಟ್ಟಿರುವ ಬಗ್ಗೆ ಬರೆಯಲಾಗಿದೆ. 2 ನೇ ಖರೀದಿ ಕರಾರ ಪತ್ರದಲ್ಲಿ ಮುಂಗಡ ಹಣ ಎಷ್ಟು ಎಂದು ಬರೆಸಿರುತ್ತೀರಿ ಎಂದರೆ ಸಾಕ್ಷಿಯು ರೂ.1,20,000/- ಎಂದು ನುಡಿಯುತ್ತಾರೆ.

6. ವಾದಿ ಪ್ರತಿವಾದಿಗೆ ಮುಂಚೆ ರೂ.7,60,000/- ಗಳನ್ನು ಕೊಟ್ಟಿರುವ ಬಗ್ಗೆ ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ವಾದಿಯ ಹತ್ತಿರ ಇದ್ದ ಕಾಗದವನ್ನು ನೋಡಿ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಅದು ಯಾವ ಕಾಗದ ಪತ್ರ ಇರುತ್ತದೆ ಎಂದರೆ ಸಾಕ್ಷಿಯು ನೊಂದಾಯಿತ ಕಾಗದ ಪತ್ರ ಇರುತ್ತದೆ ಎಂದು ಹೇಳುತ್ತಾರೆ. ಸದರಿ ರೂ.7,60,000/- ಹಣವನ್ನು ನನ್ನ ಸಮಕ್ಷಮ ವಾದಿಯು ಪ್ರತಿವಾದಿಗೆ ಕೊಟ್ಟಿರುವುದಿಲ್ಲ. 2 ನೇ ಖರೀದಿ ಕರಾರ ಪತ್ರದ ಸಮಯದಲ್ಲಿ ವಾದಿಯು ಪ್ರತಿವಾದಿಗೆ ರೂ.1,20,000/- ಹಣ ಕೊಟ್ಟಿರುತ್ತಾನೆ. ಸದರಿ ಹಣವನ್ನು ಕೊಡುವ ಸಮಯದಲ್ಲಿ ನಾನು, ನಿಂಗಪ್ಪ ಸಣ್ಣಕ್ಕಿ, ವಾದಿ ಮತ್ತು ಪ್ರತಿವಾದಿಯರು ಎಲ್ಲರೂ ಇದ್ದೇವು. ಸದರಿ ಹಣವನ್ನು ನಗದು ರೂಪದಲ್ಲಿ ವಾದಿಯು ಪ್ರತಿವಾದಿಗೆ ಕೊಟ್ಟಿರುತ್ತಾನೆ. ಸದರಿ ನಗದು ಹಣ ರೂ.500/- ಮುಖಬೆಲೆ 240 ನೋಟುಗಳು ಇದ್ದವು. ಸದರಿ ಹಣವನ್ನು ಬಾಂಡ್ ರೈಟರ್ ರವರ ಕಛೇರಿಯಲ್ಲಿ ಕೊಟ್ಟಿರುತ್ತಾರೆ. ಸದರಿ ಖರೀದಿ ಕರಾರ ಪತ್ರದಲ್ಲಿ ಒಂದು ವರ್ಷದ ಅವಧಿ ಬಗ್ಗೆ ಬರೆಸಲಾಗಿರುತ್ತದೆ. ಸದರಿ ಖರೀದಿ ಕರಾರ ಪತ್ರವನ್ನು ಸಾಯಂಕಾಲ 4.00 ರಿಂದ 5.00 ರ ಸಮಯದಲ್ಲಿ ತಯಾರಿಸಲಾಗಿದೆ. ಸದರಿ ಖರೀದಿ ಕರಾರ ಪತ್ರವು ಸಂಜೆ 4-5 ರ ಸಮಯದಲ್ಲಿ ನೋಂದ ಆಗಿರಬಹುದು. ಸದರಿ ಖರೀದಿ ಕರಾರ ಪತ್ರಕ್ಕೆ ಸಾಕ್ಷಿದಾರರಾಗಿ ನಾನು ಮತ್ತು ನಿಂಗಪ್ಪ ಸಣ್ಣಕ್ಕಿ ಇಬ್ಬರು ಸಹಿ ಹಾಕಿರುತ್ತೇವೆ.

7. ಸದರಿ ಖರೀದಿ ಕರಾರ ಪತ್ರ ನೋಂದಣಿ ಕಾಲಕ್ಕೆ ಪ್ರತಿವಾದಿಯ ಹೆಂಡತಿ, ಮಕ್ಕಳು ಕಛೇರಿಗೆ ಬಂದಿರಲಿಲ್ಲ. ಸದರಿ ಪತ್ರದ ಕುರಿತು ಪ್ರತಿವಾದಿಯ ಹೆಂಡತಿ ಮಕ್ಕಳಿಗೆ ತಿಳಿಸಿರುತ್ತೇವೆ. ವಾದಿ ಮತ್ತು ನಾನು ಒಂದೇ ಊರಿನವರು ಇದ್ದು, ಅಕ್ಕ-ಪಕ್ಕದ ನಿವಾಸಿಗಳು ಎಂದರೆ ನಿಜ. ಪ್ರತಿವಾದಿ 1 ನೇ ಖರೀದಿ ಕರಾರ ಪತ್ರದ ಪ್ರಕಾರ ವಾದಿಗೆ ಹಣ ಮರುಪಾವತಿ ಮಾಡಿದ್ದು, ಸದರಿ ಪತ್ರವನ್ನು ರದ್ದುಗೊಳಿಸಬೇಕೆಂದು ಪ್ರತಿವಾದಿಯನ್ನು ನೊಂದಣಿ ಕಛೇರಿಗೆ ಕರೆದುಕೊಂಡು ಹೋಗಿ 2 ನೇ ಖರೀದಿ ಕರಾರ ಪತ್ರವನ್ನು ವಾದಿ ಬರೆಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಎಲ್ಲಾ ವಿಷಯ

ನನಗೆ ಗೊತ್ತಿದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿದ್ದರಿಂದ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳಿಗೂ ಎಲ್ಲರೂ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಅವರೆಲ್ಲರ ಸಮ್ಮತಿ ಮೇರೆಗೆ ಪ್ರತಿವಾದಿ ದಾವಾ ಜಮೀನನ್ನು ಮಾರಾಟ ಮಾಡಲು ಒಪ್ಪಿ ಖರೀದಿ ಕರಾರ ಪತ್ರ ಬರೆದುಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ